ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ,

ದಿನಾಂಕ : 20.7.2005ರ 34ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 15 ಉತ್ತರಗಳನ್ನು, ತಡೆಹಿಡಿಯಲಾದ 1 ಪ್ರಶ್ನೆಗಳ ಪೈಕಿ 1 ಉತ್ತರವನ್ನು, ಲಿಖಿತ ಮೂಲಕ ಉತ್ತರಿಸುವ 107 ಪ್ರಶ್ನೆಗಳ ಪೈಕಿ 97 ಉತ್ತರಗಳನ್ನು.

ದಿನಾಂಕ : 22.7.2005ರ 36ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಉತ್ತರಗಳನ್ನು, ಲಿಖಿತ ಮೂಲಕ ಉತ್ತರಿಸುವ 68 ಪ್ರಶ್ನೆಗಳ ಪೈಕಿ 60 ಉತ್ತರಗಳನ್ನು.

ದಿನಾಂಕ: 27.7.2005ರ 39ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು ತಡೆಹಿಡಿಯಲಾದ 2 ಪ್ರಶ್ನೆಗಳ ಪೈಕಿ 2 ಉತ್ತರಗಳನ್ನು, ಲಿಖಿತ ಮೂಲಕ ಉತ್ತರಿಸುವ 95 ಪ್ರಶ್ನೆಗಳ ಪೈಕಿ 86 ಉತ್ತರಗಳನ್ನು

ದಿನಾಂಕ: 28.07.2005ರ 40ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 10 ಉತ್ತರಗಳನ್ನು, ಲಿಖಿತ ಮೂಲಕ ಉತ್ತರಿಸುವ 37 ಪ್ರರ್ಶನೆಗಳ ಪೈಕಿ 31 ಉತ್ತರಗಳನ್ನು ಮತ್ತು

ದಿನಾಂಕ : 01.08.2005ರ 42ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 76 ಪ್ರಶ್ನೆಗಳ 60 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ–1)

ಅಧ್ಯಕ್ಷರು : ಮಂಡಿಸಲಾಯಿತು.

2. ಮುಖ್ಯಮಂತ್ರಿಗಳ ಹೇಳಿಕೆ.

ವಿಷಯ : ಕಳಸಾ ಬಂಡೂರಿ ಸಮಸ್ಯೆ ಬಗ್ಗೆ ಪ್ರಧಾನಮಂತ್ರಿಗಳನ್ನು ಭೇಟಿಯಾಗಿದ್ದರ ಕುರಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳೆದ ಒಂದು ವಾರದಿಂದ.....

ಶ್ರೀ ಧರಂಸಿಂಗ್ (ಮುಖ್ಯಮಂತ್ರಿ) : ಒಂದು ನಿಮಿಷ... ನಾನು ಮತ್ತು ಶ್ರೀ ಮಲ್ಲಿಕಾರ್ಜುನ್ ಖರ್ಗೆಯವರು ನಿನ್ನೆ ದಿವಸ ಪ್ರಧಾನಮಂತ್ರಿಗಳನ್ನು ಭೇಟಿಯಾದ ಸಂದರ್ಭದಲ್ಲಿ ಕಳಸಾ ಬಂಡೂರಿ ಸಮಸ್ಯೆಯ ಬಗ್ಗೆ ವಿವರವಾದ ಚರ್ಚೆಯನ್ನು ಮಾಡಿದ್ದೇವೆ. 7.5 ಟಿ.ಎಂ.ಸಿ. ನೀರನ್ನು ಬಿಡಬೇಕಾಗಿದೆ. ಇದರ ಬಗ್ಗೆ ವಿರೋಧಪಕ್ಷದ ಹಾಗೂ ಇತರೆ ಎಲ್ಲಾ ಪಕ್ಷದ ನಾಯಕರೂ ಸಹ ಪ್ರಸ್ತಾಪ ಮಾಡಿದ್ದಾರೆ. ಅಧಿವೇಶನದ ನಂತರ ಸರ್ವ ಪಕ್ಷದ ನಿಯೋಗವೊಂದು ತಮ್ಮಲ್ಲಿಗೆ ಬರುವುದಾಗಿ ತಿಳಿಸಿದಾಗ ಅವರು ಆಗಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ಆರನೇ ತಾರೀಖು ನಿಯೋಗ ಬರುವಂತೆ ದಿನಾಂಕವನ್ನು ನಿಗದಿಪಡಿಸಿದ್ದಾರೆ. ಮೊಟ್ಟಮೊದಲನೆಯದಾಗಿ ಹೇಳಿದ್ದೇನೆಂದರೆ 7.5 ಟಿ.ಎಂ.ಸಿ. ನೀರು ಬಿಡುವ ಬಗ್ಗೆ ಗೋವಾದ ಕಮಿಟ್ಮೆಂಡ್ ಬಹಳ ದಿವಸಗಳಿಂದ ಮಧ್ಯದಲ್ಲಿ ಉಳಿದುಬಿಟ್ಟಿದೆ. ಇದಕ್ಕೆ ನೀವು ಆದೇಶ ಕೊಡಬೇಕೆಂದು ಕೇಳಿದ್ದೇವೆ. ಹಾಗಾಗಿ ಸಮಯವನ್ನು ನಾನು ತಮಗೆ ತಿಳಿಸುತ್ತೇನೆ. ಒಟ್ಟಾರೆ ಐದನೇ ತಾರೀಖು ಇಲ್ಲಿಂದ ಸರ್ವಪಕ್ಷ ನಿಯೋಗ ಹೊರಟು ಆರನೇ ತಾರೀಖು ಪ್ರಧಾನಮಂತ್ರಿಯವರನ್ನು ಭೇಟಿ ಮಾಡಬೇಕಾಗಿದೆ. ಎರಡನೆಯದಾಗಿ ಮೊಟ್ಟ ಮೊದಲ ಬಾರಿಗೆ ಪ್ರಧಾನಮಂತ್ರಿಗಳು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಒ.ಎನ್.ಜಿ.ಸಿ. ಪ್ರಾಜೆಕ್ಟ್‌ಗೆ 21,176 ಕೋಟಿ ರೂಪಾಯಿಗಳನ್ನು ತಾವು ಕೊಟ್ಟಿದ್ದಕ್ಕಾಗಿ ನಮ್ಮ ವಿರೋಧಪಕ್ಷದ ನಾಯಕರು ಹಾಗೂ